ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 32-35
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆರಂಭಿಕ ಬಾಲ್ಯ ಶಿಕ್ಷಣದ ಪಠ್ಯಕ್ರಮ ಮತ್ತು ಬೋಧನಾ ವಿಧಾನ

**ಡಾ. ಕೆ.ಸಿ. ಸೋಮಲತ**
ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಬಾಲ್ಯ ಶಿಕ್ಷಣವು ವ್ಯಕ್ತಿಗಳ ಜೀವನದಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಈ ಶಿಕ್ಷಣವು ಮಗುವಿಗೆ ಎರಡು ವರ್ಷವನ್ನು ತಲುಪಿದಾಗ ಪ್ರಾರಂಭವಾಗುತ್ತದೆ. ಇದು ಮಗುವಿನ ಕಲಿಕೆಯು ಎಲ್ಲಿ ನಡೆಯುತ್ತದೆಯೋ ಅಲ್ಲಿ ಅಡಿಪಾಯವನ್ನು ಸ್ಥಾಪಿಸುತ್ತದೆ. ಬಾಲ್ಯದ ಶಿಕ್ಷಣದ ಉದ್ದೇಶ ಮತ್ತು ಮಹತ್ವವನ್ನು ಅರ್ಥಮಾಡಿಕೊಳ್ಳುವುದು ಈ ಸಂಶೋಧನಾ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಆರಂಭಿಕ ಬಾಲ್ಯದ ಹಂತವು ನಿರ್ಣಾಯಕವಾಗಿದೆ, ಅಲ್ಲಿ ಮನೆಯಲ್ಲಿ ಪೋಷಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಮಕ್ಕಳ ಬಗ್ಗೆ ಸಾಕಷ್ಟು ಗಮನ ಹರಿಸಬೇಕು. ಶೈಕ್ಷಣಿಕ ಪರಿಕಲ್ಪನೆಗಳು, ಆಟದ ಚಟುವಟಿಕೆಗಳು, ಕಲೆ ಮತ್ತು ಕರಕುಶಲ, ಆರೋಗ್ಯ, ದೈಹಿಕ ವ್ಯಾಯಾಮ, ಕ್ರೀಡೆ, ಆಟಗಳು, ಪರಿಸರ, ಸಂವಹನ, ಉತ್ತಮ ನಡತೆ ಮತ್ತು ಶಿಷ್ಟಾಚಾರಗಳ ಬಗ್ಗೆ ಅವರಿಗೆ ಸಮರ್ಥ ಜ್ಞಾನವನ್ನು ನೀಡಲು ಸಾಧ್ಯವಾದಾಗ, ಅವರು ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. ಪಠ್ಯಕ್ರಮ ಮತ್ತು ಬೋಧನಾ ವಿಧಾನ ಶಿಕ್ಷಣದ ಸ್ವಾಧೀನ. ಬಾಲ್ಯದ ಶಿಕ್ಷಣದ ಪ್ರಗತಿಗೆ ಕಾರಣವಾಗಲು, ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಸಿಬ್ಬಂದಿಗಳ ಸಾಕಷ್ಟು ಜ್ಞಾನ, ಸೌಹಾರ್ದ ಮತ್ತು ಕಾಳಜಿಯು ಹೆಚ್ಚಿರಬೇಕು. ಅವರು ಯುವ ವಿದ್ಯಾರ್ಥಿಗಳ ಅಗತ್ಯಗಳನ್ನು ಸೂಕ್ತವಾಗಿ ನೋಡಿಕೊಳ್ಳಬೇಕು.*

***Keywords:*** *ಶಿಕ್ಷಣ, ಆರಂಭಿಕ ಬಾಲ್ಯ ಶಿಕ್ಷಣ, ಪಠ್ಯಕ್ರಮ, ಬೋಧನಾ ವಿಧಾನ.*

## ಪೀಠಿಕೆ

ಭಾರತದಂತಹ ಸಂಸ್ಕೃತಿ, ಪ್ರಾದೇಶಿಕ, ಮತಧರ್ಮ, ಭಾಷಾವೈವಿಧ್ಯತೆಯುಳ್ಳ ದೇಶದಲ್ಲಿ ಶಿಕ್ಷಣದಂತಹ ಪ್ರಮುಖವಾದ ವಿಷಯವನ್ನು ಚರ್ಚಿಸಿ ಸಾಮಾಜಿಕ ಸಮಾನತೆಯನ್ನು ತರುವಂತಹ ನಿಟ್ಟಿನಲ್ಲಿ ಪಠ್ಯಕ್ರಮಗಳು ರಚಿತವಾಗಬೇಕಾಗಿದೆ. ಶಿಕ್ಷಣ ಎಂದರೆ ಅಭಿವೃದ್ಧಿ ಎಂದರ್ಥ ಹೀಗಿರುವಾಗ ಅದರ ಸ್ಪಷ್ಟತೆ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳಲ್ಲೇ ಅಡಗಿರುತ್ತದೆ. ಅದನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ 1985ರಲ್ಲಿ "ಚಾಲೆಂಜ್ ಆಫ್ ಎಜುಕೇಷನ್: ಎ ಪಾಲಿಸಿ ಪರ್ಸ್‌ಪೆಕ್ಟಿವ್" ಎಂಬ 119 ಪುಟಗಳ ದಾಖಲು ಪತ್ರದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುವಂತೆ "ಶಿಕ್ಷಣವೆಂಬುದು ಕೇವಲ ಒಂದು ರಾಜ್ಯದ ಹೊಣೆಯಲ್ಲ, ಇದರಲ್ಲಿ ದೇಶದಾದ್ಯಂತ ಇರುವ ಐಚ್ಛಿಕ ಸಂಘಟನೆಗಳ ಸಹಭಾಗಿತ್ವವಿದ್ದು, ಅಗತ್ಯವಿದ್ದರೆ ಅವುಗಳ ಸಹಭಾಗಿತ್ವವನ್ನು ಹೆಚ್ಚಿಸಲು ಅವಕಾಶಗಳಿವೆ" ಎಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಬಾಲ್ಯ ಶಿಕ್ಷಣಕ್ಕೆ ಬೇಕಾಗುವ ಪಠ್ಯಕ್ರಮ ಮತ್ತು ಬೋಧನಾ ವಿಧಾನದಲ್ಲಿ ಸಾಕಷ್ಟು ನಿರೀಕ್ಷೆ ಹಾಗೂ ಆಪೇಕ್ಷೆಗಳಿರುವುದು ಸೂಕ್ತವಾದುದ್ದಾಗಿದ್ದು, ಇಂತಹ

***Please cite this article as:*** ಸೋಮಲತ, ಕೆ.ಸಿ. (2023). ಆರಂಭಿಕ ಬಾಲ್ಯ ಶಿಕ್ಷಣದ ಪಠ್ಯಕ್ರಮ ಮತ್ತು ಬೋಧನಾ ವಿಧಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 32–35.

ಸಂಸ್ಥೆಗಳ ಅಥವಾ ಸಂಘಟನೆಗಳ ನಿರ್ದಿಷ್ಟ ಪಾತ್ರಗಳೆನಿರಬೇಕೆಂಬ ಸ್ಪಷ್ಟತೆಯ ಅರಿವು ಇದ್ದಾಗ ಕರ್ನಾಟಕದಂತಹ ರಾಜ್ಯದಲ್ಲಿ ಶೈಕ್ಷಣಿಕ ಗುಣಮಟ್ಟ ಉತ್ತಮವಾಗಿರುತ್ತದೆ. ಇಲ್ಲವಾದಲ್ಲಿ ಶಿಕ್ಷಣದ ವ್ಯಾಪಾರೀಕರಣದ ಜೊತೆಗೆ ನೈಪುಣ್ಯತೆ ಇಲ್ಲದ ಪಠ್ಯಕ್ರಮಗಳು ಬೋಧನಾ ವಿಧಾನದ ದಿಕ್ಕನ್ನೆ ಬದಲಿಸಿ ಮೊಳಕೆಯೊಡೆಯುತ್ತವೆ. ಬಾಲವಿದ್ಯಾರ್ಥಿಗಳ ಮನಸ್ಸಿನಾಳದಲ್ಲಿ ಬಾಂಧವ್ಯ ಕೊರತೆಗಳುಂಟಾಗಿ ರಾಜ್ಯದ ಅಭಿವೃದ್ಧಿಗೆ ಘೋರವಾದ ಹೊಡೆತಗಳುಂಟಾಗುತ್ತವೆ. ಆದ್ದರಿಂದ ಸರ್ಕಾರವು ರಾಷ್ಟೀಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಾಗ ರಕ್ಷಣಾ ಇಲಾಖೆಯ ನಂತರದ ಬಹುಮುಖ್ಯ ವಿಭಾಗ ಶಿಕ್ಷಣವಾಗಿರುವುದರಿಂದ ಇದರ ಕಾಳಜಿ ಸಹಜವಾಗಿಯೇ ಸರ್ಕಾರಕ್ಕಿರಬೇಕಾಗಿರುತ್ತದೆ.

ಸಾಮಾಜೀಕರಣದಂತಹ ಹಂತದಲ್ಲಿರುವ ಬಾಲ್ಯ ಶಿಕ್ಷಣ ಅಂದರೆ 6–14 ವರ್ಷದೊಳಗಿನ ವಿದ್ಯಾರ್ಥಿಗಳ ಭಾವನಾತ್ಮಕ, ಹೊಂದಾಣಿಕೆಯ, ದೇಶಪ್ರೇಮದ ಜೊತೆಗೆ ವೈಜ್ಞಾನಿಕ ಪರಿದೃಷ್ಟಿಯನ್ನು ಹೊಂದಿರುವಂತಹ ಜ್ಞಾನವು ಸ್ವತಃ ಪರಿವರ್ತನೆಗೆ ಕಾರಣವಾಗುವಂತಿರಬೇಕಾಗಿದೆ. ಈ ನಿಟ್ಟಿನಲ್ಲಿ ಪಠ್ಯಕ್ರಮ ರಚಿಸುವುದು ಮತ್ತು ಬೋಧಿಸುವುದು ಇವೆರಡು ಕೇವಲ ಕಾರ್ಯವಾಗಬಾರದು. ನಿಷ್ಠೆಯ ಕಾಯಕವಾಗಿದ್ದಾಗ ಮಾತ್ರ ಕಿರಿಯ ಪೀಳಿಗೆಯನ್ನು ಬುದ್ಧಿಪೂರ್ವಕವಾದ ಸರಿ–ತಪ್ಪುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ ಮತ್ತು ವಾಸ್ತವಿಕತೆಯನ್ನು ಮನದಟ್ಟು ಮಾಡಿಕೊಡಲು ಸಹಾಯಕವಾಗಬಲ್ಲದು. ಈ ನಿಟ್ಟಿನಲ್ಲಿ ಪಠ್ಯಕ್ರಮ ರಚಿತವಾದಾಗ ಬೋಧನಾ ವಿಧಾನವು ಗುಣಮಟ್ಟದ್ದಾಗಿರುತ್ತದೆ.

ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಹಂತದ ಶಿಕ್ಷಣ ವ್ಯವಸ್ಥೆಯನ್ನು ವಿಶ್ಲೇಷಿಸಿ ಹಾಸನ ಮತ್ತು ಕೊಡಗು ಜಿಲ್ಲೆಯ ಶಾಲೆಗಳಿಗೆ ಭೇಟಿ ನೀಡಿ ಈ ಲೇಖವನ್ನು ಸಿದ್ಧಪಡಿಸಲಾಗಿದೆ.

ಮಕ್ಕಳು ಸಾಮಾಜಿಕ ಸಂದರ್ಭಗಳಲ್ಲಿ ವಿಕಾಸ ಗೊಂಡಂತೆಲ್ಲ ಅವರ ಬುದ್ಧಿವಿಕಾಸ ಮತ್ತು ಪ್ರವೃತ್ತಿಗಳ ನಡುವೆ ಘರ್ಷಣೆಗಳುಂಟಾಗುವುದರಿಂದ ಅವರು ಪ್ರಧಾನ ವಿಷಯದ ಮೇಲೆ ಕೇಂದ್ರೀಕೃತ ವಾಗಬೇಕಾಗಿರುತ್ತದೆ. ಅದನ್ನು "ಎರಿಕ್‌ಸನ್" ರವರು ಕೂಡ "ವ್ಯಕ್ತಿತ್ವ ವಿಕಾಸ" ಎಂದು ಗುರುತಿಸಿದ್ದಾರೆ. ಈ ಹಂತದಲ್ಲಿ ವರ್ತನಾ ವಿನ್ಯಾಸದ ಬೋಧನೆ ಮತ್ತು ಸಮಾಯೋಜನೆಗಳನ್ನೊಳಗೊಂಡ ಬೋಧನೆಯು ಅನುಕೂಲಕರವಾಗಿರಬೇಕು ಎಂದಿದ್ದಾರೆ.

ಆಧುನಿಕ ಸಮಾಜದ ಜೀವನಕ್ಕೆ ಅಣಿಯಾಗಲು ಶಿಕ್ಷಣ ಅತ್ಯವಶ್ಯಕ ಮಾಧ್ಯಮವಾಗಿದೆ. ಆದರೆ ಸಾಮಾಜಿಕ ಒಡನಾಟ ಉಂಟಾಗುವುದರಿಂದ ಬಾಲ್ಯದಲ್ಲಿ ಸೂಕ್ಷ್ಮ ಮನಸ್ಸನ್ನು ಅರಳಿಸಲು ಶಾಲೆಯಲ್ಲಿನ ಬೋಧನೆ ಹೆಚ್ಚು ಪರಿಣಾಮಕಾರಿ ಯಾಗಬೇಕಾಗಿದೆ, ಹಾಗೂ ತಂದೆ–ತಾಯಿಗಿಂತ ಭಿನ್ನರಾದ ಉಪಾಧ್ಯಾಯರು ವಿವೇಚನಾವುಳ್ಳ ವ್ಯಕ್ತಿತ್ವದವರಾಗಿರಬೇಕಾಗಿರುತ್ತದೆ. ಅದಕ್ಕಾಗಿ ಬಾಲ್ಯ ಶಿಕ್ಷಣದಲ್ಲಿ ಕೆಲವು ನಿಯಮಿತ ಕಾರ್ಯಗಳನ್ನು ಹಾಕಿಕೊಳ್ಳಬೇಕಾಗಿದೆ. ಅವುಗಳೆಂದರೆ,

ಸಾಮಾಜಿಕ ಪರಂಪರೆಯ ರಕ್ಷಣೆ, ಇದನ್ನು ಸಂಸ್ಕೃತಿಯ ಒಂದು ಭಾಗವಾಗಿ ಸಾಮಾಜಿಕ ಜವಾಬ್ದಾರಿಯ ಕರ್ತವ್ಯವೆಂದು, ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಅನುಮೋದಿತ ಮನೋಭಾವನೆಗಳೊಂದಿಗೆ ಅದರ ರೂಪ–ಸ್ವರೂಪಗಳ ಬಗ್ಗೆ ನೋಡುವುದಾಗಿದೆ.

ಮೊಟ್ಟಮೊದಲ ಸಾಮಾಜಿಕ ಚಲನೆಯಾಗಿ ಎಷ್ಟು ಮನೋಭಾವನೆಗಳೊಂದಿಗೆಪರಂಪರೆಯ ವರ್ಗಾವಣೆ ಮಾಡುವುದು, ಅದರ ಜೊತೆ ವಿಧೇಯತೆ, ವಿನಯತೆಯಂತಹ ಮೌಲ್ಯಗಳನ್ನು ಚಿಕ್ಕವರಿರುವಾಗಲೇ ಕಲಿಸಬೇಕಾಗುತ್ತದೆ. ಶಾಲೆಗಳೆಂದರೆ ಬಹುಮಟ್ಟಿಗೆ ಪ್ರಾಮಾಣಿಕತೆ, ಆತ್ಮಗೌರವ, ಶಿಷ್ಟಾಚಾರ, ಸರಿ–ತಪ್ಪುಗಳ ಅರಿವು ಮೂಡಿಸುವಂತಹ ಜ್ಞಾನದೇಗುಲ, ಹಾಗಾಗಿ ಶಿಕ್ಷಣವೆಂಬುದು ಬಾಲ್ಯದಲ್ಲಿ ಕಲಿಕೆಯಾಗಿ ನಂತರ ಉತ್ಪನ್ನಕಾರಕವಾದ ಕಾರ್ಯನಿರ್ವಹಿಸುವ

ಸಾಮರ್ಥ್ಯವನ್ನು ನೀಡುವಂತಿರಬೇಕಿದೆ. ಇದು ಕೇವಲ ಶಾಲೆಗಳಿಗೆ ಸೀಮಿತವಾಗಿರದೆ ಕುಟುಂಬದ ನಿರ್ವಹಣೆಯಲ್ಲಿಯೂ ಅದೇ ರೀತಿ ಮುಂದೊಂದು ದಿನ ಮಹತ್ವ ಪಡೆಯುತ್ತದೆ.

ಇದರ ಜೊತೆ–ಜೊತೆಗೆ ಸಾಂಸ್ಕೃತಿಕ ಮಹತ್ವವುಳ್ಳ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಏರ್ಪಡಿಸುವುದು, ಕ್ರೀಡೆಗಳನ್ನು ನಡೆಸುವುದರಿಂದ ಬಾಲ್ಯದಲ್ಲಿ ಕಲಿಕೆ ಮತ್ತು ಗ್ರಹಿಕೆಗಳೊಂದಿಗೆ ಜ್ಞಾನದ ಉದ್ದೇಶ ನಿರ್ಧಿಷ್ಟವಾದ ಗುರಿಯೆಡೆಗೆ ಸಾಗಲು ಸಹಕಾರಿಯಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಸುದ್ದಿ ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸುವುದು, ತಮ್ಮ–ತಮ್ಮ ಪರಿಸರದಲ್ಲಿನ ಸಮಸ್ಯೆಗಳನ್ನು ಗುರುತಿಸುವ ರೀತಿ, ಸಾಮಾಜಿಕ ಸಂಬಂಧ ಮತ್ತು ವ್ಯಕ್ತಿಯ ಸಾಮರ್ಥ್ಯ ಸೃಜನಾತ್ಮಕ ಮಾದರಿಯ ಕಲಿಕೆ ಮತ್ತು ತರಬೇತಿ ನೀಡುವುದು ಈ ರೀತಿಯ ಬೋಧನೆಗಳಿಂದಾಗಿ "ಬಾಲ್ಯದಲ್ಲಿಯೇ ವಿದ್ಯಾರ್ಥಿಗಳು ಸ್ವಾವಲಂಬಿತನದ" ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ.

ಇಂತಹ ಸಂದರ್ಭದಲ್ಲಿ "ಹೌದು ಅಥವಾ ಇಲ್ಲ" ಎಂಬ ಉತ್ತರಗಳನ್ನುಕೊಡುವಂತಹ ಪ್ರಶ್ನೆಗಳೊಂದಿಗೆ ಮುಂದುವರಿಸಿ ಕ್ರಿಯೆ–ಪ್ರಕ್ರಿಯೆಗಳ ರೂಪದಲ್ಲಿ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವಂತೆ ಬೋಧನೆಯನ್ನು ಪ್ರಭಾವಗೊಳಿಸಿ ವಿದ್ಯಾರ್ಥಿಗಳನ್ನು ಸ್ವತಂತ್ರಗೊಳಿಸಬೆಕಾಗಿದೆಯಲ್ಲದೆ, ಹೊಸದೊಂದು ವಿಷಯಕ್ಕೆ ಅವರು ತೆರೆದುಕೊಳ್ಳುವಂತೆ ಮಾಡುವ ಗುರಿ ಮತ್ತು ಉದ್ದೇಶಗಳಿರಬೇಕಾಗಿದೆ.

ಬಾಲ್ಯದಲ್ಲಿರುವ ಮಕ್ಕಳ ತುಂಟತನವನ್ನು ಮರೆತು ಕಲಿಕೆಯಲ್ಲಿ ತೊಡಗುವಂತೆ ಮೊದಲು ಬೋಧಕರಿಗಿಂತ ಕಲಿಕಾರ್ಥಿಗಳನ್ನು ಮುಖ್ಯವಾಗಿರಿಸಿ ಕೊಂಡಿರಬೇಕಾದ, ಸರಳವಾದ ಚಟುವಟಿಕೆ ಮತ್ತು ಸಕ್ರೀಯ ಪಾಲ್ಗೊಳ್ಳುವಿಕೆ ಇರುವುದರ ಜೊತೆಗೆ ಏಕತಾನತೆಗಿಂತ ಕುತೂಹಲ, ಆಸಕ್ತಿದಾಯಕವಾದ ಕಲಿಕೆಗಳನ್ನು ಗುರುತಿಸಿ ಕಪ್ಪುಹಲಗೆಯ ಮೇಲೆ ಬರೆಯುವ ಮೂಲಕ ಜ್ಞಾನದ ಸಾಮರ್ಥ್ಯವನ್ನು ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆಗಳಾಗಿ ಮಾಡಿ ಕಲಿಕೆಯ ಮುಂದುವರಿಕೆಗಾಗಿ ಗೃಹಕಾರ್ಯಗಳನ್ನು ನೀಡುವುದರಿಂದ ಬಾಲ್ಯಶಿಕ್ಷಣದ ಕಲಿಕಾ ಪ್ರಕ್ರಿಯೆಗಳು ಗುರಿಸಾಧಿತವಾಗುತ್ತದೆ. ಖಾಸಗಿ ಮತ್ತು ಜಾಗತಿಕ ಸವಾಲುಗಳನ್ನು ನಮ್ಮ–ನಮ್ಮ ಭಾಷೆ ಉಳಿಸಿಕೊಂಡೇ ಯುವಪೀಳಿಗಳನ್ನು ಈ ನಾಡಿನ ಆಸ್ತಿಯನ್ನಾಗಿಸ ಬಹುದೆಂಬ ಆಶಯಗಳೊಂದಿಗೆ ಈ ಅಧ್ಯಯನ ಕೈಗೊಳ್ಳಲಾಗಿತ್ತು. ಇದರ ಫಲಿತಾಂಶಗಳು ಕೆಲವು ಜಿಲ್ಲೆಗಳ ಶಾಲೆಗಳಿಂದ ಹೊರಬಂದ ಅಂಶಗಳೆಂದರೆ ಕುಟುಂಬ ಮತ್ತು ಸಾಮಾಜಿಕ ಹಿನ್ನೆಲೆಯು ಬಾಲ್ಯಶಿಕ್ಷಣವನ್ನು ಪ್ರಭಾವಿಸುವ ಅಂಶವೆಂದು ತಿಳಿದು ಬಂದಿದೆ.

**ಉಪಸಂಹಾರ**

ಶಿಕ್ಷಣ ಸಂಸ್ಥೆಗಳೆಂದರೆ "ಜ್ಞಾನ ಸಂಪತ್ತನ್ನು" ವರ್ಗಾಯಿಸುವಂತಹ ಹೊಣೆ ಹೊತ್ತಿರುವುದ ಎಷ್ಟು ಸತ್ಯವೋ ಅಷ್ಟೇ ಪ್ರಾಮುಖ್ಯತೆ "ಬಾಲ್ಯ ಶಿಕ್ಷಣದ ಪಠ್ಯಕ್ರಮ ಮತ್ತು ಬೋಧನೆಯಲ್ಲಡಗಿರಬೇಕಾಗಿ ರುತ್ತದೆ". ಹಾಗಿದ್ದಾಗ ಮಾತ್ರ ವಿಭಿನ್ನ ರೀತಿಯ ಶೈಕ್ಷಣಿಕ ಸಾಧನೆಗಳನ್ನು ತೋರಿಸಲು ನಮ್ಮ ಕರ್ನಾಟಕದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅದರಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳವರ್ಗಗಳ ಕುಟುಂಬಗಳಿಗೆ ಸೇರಿದ ಮಕ್ಕಳು ಕೂಡ ಶೈಕ್ಷಣಿಕ ಸಾಧನೆಗಳಿಂದ ವಂಚಿತರಾಗುವುದಿಲ್ಲ. ಹಾಗೆಯೇ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ. ಇದರಲ್ಲೂ ಲಿಂಗತಾರತಮ್ಯವನ್ನು ಹೋಗಲಾಡಿಸುವುದು ಮತ್ತು ಬಾಲ್ಯದಲ್ಲಿಯೇ "ಸ್ವಪ್ರಜ್ಞೆ" ಯನ್ನು ಮೂಡಿಸಲು 'ಏಕತೆಯನ್ನು' ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಅನೇಕ ಸಮಾಜಶಾಸ್ತ್ರಜ್ಞರು ಮತ್ತು ಬ್ರಿಟನ್ನಿನ ಶೈಕ್ಷಣಿಕ ಸಮಾಜಶಾಸ್ತ್ರಜ್ಞರು 1950–60ರ ದಶಕಗಳಲ್ಲಿಯೇ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಬಾಲ್ಯಶಿಕ್ಷಣ ಮತ್ತು ಬೋಧನೆಗಳು ಮಹತ್ವ ಪಡೆದಿವೆ.

**ಪರಾಮರ್ಶನ ಗ್ರಂಥಗಳು**

- Calman, L.J., & Whelan, L.T. (2005). *Early Childhood Education for All*. New York: Legal
- Currie, J. (2001). Early Childhood Education Programs. *Journal of Economic Perspective, 15(1)*, 213-238. Retrieved March 19, 2018,
- Dahlberg, G., Moss, P., & Pence, A. (2007). Beyond quality in early childhood education and care. In *Routledge eBooks*.
- Gupta, A. (2006). Early childhood education, postcolonial theory, and teaching practices in India : balancing Vygotsky and the Veda. In *Palgrave Macmillan eBooks*.
- Kaul, V., & Sankar, D. (2009). *Early Childhood Care and Education in India*. Retrieved